

ಕ್ರೂಡಿ ಪ್ರತಿಮೆ




ಹಂಗೇರಿಯನ್ ಭೌತಶಾಸ್ತ್ರಜ್ಞ
ಬ್ಯಾರನ್ ಲೊರಾಂಡ್ ಈಟ್ವೊಸ್

ಅಭಿವ್ಯಕ್ತಿಸಿದ್ದಾರೆ. ಈ ಪುಟ್ಟ ಪ್ರತಿಮೆಗಳ ವಿಶೇಷವೇನೆಂದರೆ, ಬಹುಪಾಲು ಪ್ರತಿಮೆಗಳನ್ನು ಬೇಲಿ, ಗೋಡೆಯ ಮೇಲೆ ಅಥವಾ ಪಾದಚಾರಿ ರಸ್ತೆಗಳ ಪಕ್ಕದಲ್ಲಿ ಇಟ್ಟಿರುವುದು. ಪ್ರತಿಮೆಗಳು ಐತಿಹಾಸಿಕ ಪಾತ್ರಗಳು, ಅಸಾಮಾನ್ಯ ವ್ಯಕ್ತಿಗಳು ಅಥವಾ ಹಂಗೇರಿ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ಕೆಲವೊಂದು ಪ್ರತಿಮೆಗಳನ್ನು 'ಗುಪ್ತವಾಗಿ' ಇಡಲಾಗಿದ್ದು, ಇವನ್ನು 'gerilla sculptures' (ಗೆರಿಲ್ಲಾ ಶಿಲ್ಪ) ಎಂದು ಕರೆಯಲಾಗುತ್ತದೆ. ಇವುಗಳನ್ನು ಹುಡುಕುವುದೇ ಒಂದು ಸವಾಲು.

## ರೂಬಿಕ್ ಕ್ಯೂಬ್ ಪ್ರತಿಮೆ

ಮಕ್ಕಳ ಒಗಟಿನ ಆಟಿಕೆ ರೂಬಿಕ್ ಕ್ಯೂಬ್ ಅನ್ನು ಕಂಡುಹಿಡಿದಿದ್ದು ಹಂಗೇರಿಯ ವಿನ್ಯಾಸಕ ಎರ್ನೊ ರೂಬಿಕ್. ಆತನ ಗೌರವಾರ್ಥ ಡಾನೂಬ್ ನದಿಯ ದಂಡೆಯಲ್ಲಿರುವ ಬತ್ಯಾನಿ ಚೌಕದ ಬಳಿ ಕಂಚಿನ ಪುಟಾಣಿ ರೂಬಿಕ್ ಶಿಲ್ಪವಿದೆ. ಇದನ್ನು ಕಲಾವಿದ ಮಿಹಾಯ್ ಕೊಲೋಡ್ಕೊ ರಚಿಸಿದ್ದು, ಹಂಗೇರಿಯಲ್ಲಿ ರೂಬಿಕ್ ಕ್ಯೂಬ್‌ನ ಸಾಂಸ್ಕೃತಿಕ ಮಹತ್ವ, ಸೃಜನಶೀಲತೆ, ಕಲಾತ್ಮಕತೆ ಮತ್ತು ಸಂಶೋಧನಾತ್ಮಕ ಗುಣಗಳನ್ನು ಪ್ರತಿಬಿಂಬಿಸುತ್ತದೆ.

## ಪುಟಾಣಿ ಟ್ಯಾಂಕ್

ಡಾನೂಬ್ ನದಿ ದಂಡೆಯಲ್ಲಿರುವ ಬಾತ್ಯಾಯಾನಿ ಚೌಕದ ಹತ್ತಿರದ ಕೋಷುತ್ ಸೇತುವೆ ಬಳಿ ಈ ಪುಟ್ಟ ಪ್ರತಿಮೆಯಿದೆ. ಸೋವಿಯತ್ ಆಕ್ರಮಣ ನೆನಪಿಸುವ ಈ ಟ್ಯಾಂಕ್ ಶಿಲ್ಪ ಹಂಗೇರಿಯ 1956ರ ಕ್ರಾಂತಿಯ ಸಂಕೇತ. ಟ್ಯಾಂಕ್ ಪಾರ್ಲಿಮೆಂಟ್ ಕಟ್ಟಡದತ್ತ ಮುಖ ಮಾಡಿದೆ. ಅದರ ಪೈಪು ಕೆಳಗೆ ಬಾಗಿದ್ದರಿಂದ ಯುದ್ಧ ಮುಗಿದಿರುವುದನ್ನು ಸೂಚಿಸುತ್ತದೆ. ಟ್ಯಾಂಕ್‌ನ ಬದಿಯಲ್ಲಿ 1956ರ ಹಂಗೇರಿ ಕ್ರಾಂತಿ ಸಮಯದ ಜನರ ಘೋಷವಾಕ್ಯ **'Ruszkik haza!'** (ರಷ್ಯನ್ನರು ಮನೆಗೆ ಹೋಗಲಿ!) ಎಂಬ ಹಂಗೇರಿಯನ್ ಅಕ್ಷರಗಳಿವೆ.

## ಕಪ್ಪೆರಾಯ

ಬುಡಾಪೆಸ್ಟ್‌ನ ಸ್ವಾತಂತ್ರ್ಯ ಚೌಕದ ಬಳಿ ಬೇಲಿಯಂಚಿನಲ್ಲಿದೆ ಕಂಚಿನ ಕಪ್ಪೆ ಶಿಲ್ಪ. 1976 ರಿಂದ 1981ರವರೆಗೆ ಟೀವಿಯಲ್ಲಿ ಪ್ರದರ್ಶಿತವಾಗುತ್ತಿದ್ದ 'ದಿ ಮಪೆಟ್ ಶೋ' ಪಾತ್ರಧಾರಿ ಈ ಹಸಿರು ಬಣ್ಣದ ಕರ್ಮಿಟ್ ದಿ ಫ್ರಾಗ್, ಎಲ್ಲರಿಗೂ ಅತ್ಯಂತ ಪ್ರೀತಿಪಾತ್ರವಾಗಿತ್ತು.

ಹಿಂದೆ 19ನೇ ಶತಮಾನದಲ್ಲಿ ಕಪ್ಪೆಯ ಕಾಲುಗಳನ್ನು ಖಾದ್ಯವಾಗಿ ಬಳಸುತ್ತಿದ್ದುದನ್ನು ನೆನಪಿಸುತ್ತಾ, ಈ ಕಪ್ಪೆರಾಯ ಹಾಸ್ಯ, ಸಾಮಾಜಿಕ ರೂಢಿ, ಸಂಸ್ಕೃತಿಗಳ ಪ್ರತಿನಿಧಿಯಾಗಿದೆ. ಸ್ಥಳೀಯರು ಚಳಿಗಾಲದಲ್ಲಿ ಇದಕ್ಕೆ ಉಣ್ಣೆಯ ಸ್ಕಾರ್ಫ್ ಕಟ್ಟಿ ಹೋಗುವರು.



ವಿಲಿಯಂ ಶೇಕ್ಸ್‌ಪಿಯರ್ ಪ್ರತಿಮೆ

**ಜೋಸೆಫ್ ಅಟ್ಟಿಲಾ ಪ್ರತಿಮೆ:** ಹಂಗೇರಿಯ ಪ್ರಸಿದ್ಧ ಕವಿ ಜೋಸೆಫ್ ಅಟ್ಟಿಲಾ **(Jzsef Attila)** ಅವರ ಪ್ರತಿಮೆ ಬುಡಾಪೆಸ್ಟ್ ನಗರದ ಮನೋಹರ ಡಾನೂಬ್ ನದಿಯ ತೀರದಲ್ಲಿ, ಹಂಗೇರಿಯ ಸಂಸತ್ ಭವನದ ಬಳಿಯಲ್ಲಿ 1980ರ ಡಿಸೆಂಬರ್ 23ರಂದು ನಿರ್ಮಿಸಲಾಗಿದೆ. ಜೋಸೆಫ್ ಅಟ್ಟಿಲಾ ಅವರು ಕುಳಿತು ಡಾನೂಬ್ ನದಿಯನ್ನು ನೋಡುತ್ತಿರುವಂತಿರುವ ಈ ಕಂಚಿನ ಪ್ರತಿಮೆ ಕೆಳಗೆ ಅವರ ಡಾನೂಬ್ ನದಿಯ ಕುರಿತಾದ ಕವನದ ಸಾಲುಗಳನ್ನು ಕೆತ್ತಲಾಗಿದೆ.

**ಬಡ್ ಸ್ಪೆನ್ಸರ್ ಪ್ರತಿಮೆ:** ಬುಡಾಪೆಸ್ಟ್ ನಗರದ ಮಧ್ಯದಲ್ಲಿ, ಬಡ್ ಸ್ಪೆನ್ಸರ್ ಅಥವಾ ಕಾರ್ಲೊ ಪೆಡೆರ್ಸೋಲಿಯ ಪ್ರತಿಮೆಯಿದೆ. ಮಾಜಿ ವೃತ್ತಿಪರ ಈಜುಗಾರ ಮತ್ತು ವಾಟರ್ ಪೋಲೊ ಆಟಗಾರನಾಗಿದ್ದ ಈತ 1960 ರಿಂದ 1980ರ ನಡುವೆ ನಟನಾಗಿಯೂ ಪ್ರಸಿದ್ಧರಾದವರು.

**ಸ್ವಾತಂತ್ರ್ಯ ಪ್ರತಿಮೆ:** ಗೆಲ್ಲರ್ಟ್ ಬೆಟ್ಟದ ಮೇಲೆ ಸ್ಥಾಪಿಸಿರುವ ಸ್ವಾತಂತ್ರ್ಯ ಪ್ರತಿಮೆ ಬುಡಾಪೆಸ್ಟ್ ನಗರದ ಪ್ರಮುಖ ಹೆಗ್ಗುರುತು. ಶಾಂತಿಯ ಸಂಕೇತವಾದ ಪಾಮ್ (ತಾಳೆ) ಎಲೆಯನ್ನು ಕೈಯಲ್ಲಿ ಮಹಿಳೆಯು ಎತ್ತಿಹಿಡಿದಿರುವ 14 ಮೀಟರ್ ಎತ್ತರದ ಈ ಕಂಚಿನ ಪ್ರತಿಮೆಯನ್ನು 1947ರಲ್ಲಿ, ನಾಜಿ ದಾಳಿಯಿಂದ ಹಂಗೇರಿಯನ್ನು ಮುಕ್ತಿಗೊಳಿಸಿದ ಸೋವಿಯತ್ ನೆರವಿನ ಸ್ಮರಣೆಗಾಗಿ ಸ್ಥಾಪಿಸಿದರಾದರೂ, ನಂತರ ಹಂಗೇರಿಯ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರ ಸ್ಮರಣಾರ್ಥ ಎಂದು ಅರ್ಥೈಸಲಾಯಿತು. ಹಂಗೇರಿಯನ್ ಶಿಲ್ಪಿ ಝಿಗ್ಮಂಡ್ ಕಿಸ್ಫಲುಡಿ ಸ್ಟ್ರೋಬ್ಲ್ ವಿನ್ಯಾಸಗೊಳಿಸಿರುವ ಈ ಸ್ವಾತಂತ್ರ್ಯ